ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ೧೯೯೦ನೇ ಮೇ ಕೊನೆಯ ವಾರದಿಂದ ಪ್ರಾರಂಭಿಸಿದೆ. ಸದರಿ ಪ್ರತಿಮೆಯ ಅಂದಾಜು ವೆಚ್ಚ ೩.೨೫ ಲಕ್ಷ ರೂಪಾಯಿಗಳು.

ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಸ್ಥಾಪನೆ ಮಾಡಿದಾರಭ್ಯ ಸಾರ್ವಜನಿಕರು ಆ ಪ್ರತಿಮೆ ಅವರನ್ನು ಹೋಲುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಶಾಸನಸಭೆಯಲ್ಲೂ ಹಾಗೆಯೇ ಚರ್ಚೆಗೆ ಬಂದು ಪ್ರತಿಮೆಯನ್ನು ಬದಲಾವಣೆ ಮಾಡುತ್ತೇವೆಂದು ಸರ್ಕಾರದವರೂ ಹೇಳಿದ್ದರು. ಆದರೆ ಇದುವರೆಗೂ ಮಾಡಿಲ್ಲ.

ಅಧ್ಯಕ್ಷರು.— ಕೆಲಸ ಶುರುವಾಗಿದೆ ಎಂದು ಹೇಳಿದ್ದಾರೆ. ೧೯೯೦ನೇ ಮೇ ಕೊನೆಯ ವಾರದಿಂದ ಕೆಲಸ ಪ್ರಾರಂಭಿಸಿದೆ ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಹಾಗಿದ್ದರೆ ಕಂಪ್ಲೀಟ್ ಯಾವಾಗ ಮಾಡುತ್ತಾರೆಂಬುದನ್ನು ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈಗಾಗಲೇ ಉತ್ತರ ಒದಗಿಸಿದ ಪ್ರಕಾರ ನಾವು ೨–೧೨–೮೯ ರಲ್ಲಿ ಆ ಪ್ರತಿಮೆಯನ್ನು ಮಾಡಲಿಕ್ಕೆ ಶ್ರೀಮಾನ್ ಕಂಜೀರಾಮನ್ ಅವರಿಗೆ ಈಗಾಗಲೇ ಹೇಳಿದ್ದೇವೆ. ಮುಂತ್ತು ೫ ತಿಂಗಳ ಕಾಲಾವಧಿಯಲ್ಲಿ ಮಾಡಬೇಕೆಂದು ಹೇಳಿದ್ದೇವೆ. ಕೆಲಸ ಈಗ ಪ್ರಗತಿಯಲ್ಲಿದೆ. ಆದಷ್ಟು ಜಾಗ್ರತೆ ಇದು ಕೆಲವೇ ತಿಂಗಳಲ್ಲೇ ಈ ಕೆಲಸ ಆಗುತ್ತದೆ. ಈ ಕೆಲಸ ಸಮರ್ಪಕವಾಗಿ ಆಗಬೇಕೆಂದು ಸ್ವಾತಂತ್ರ್ಯಯೋಧರೂ ಮಾಜಿ ಮಹಾನಗರ ಪಾಲಿಕೆ ಮೇಯರ್ ಅವರೂ ಆದ ಜೆ. ಲಿಂಗಯ್ಯನವರ ನೇತೃತ್ವದಲ್ಲಿ ಸಮಿತಿ ಮಾಡಿದ್ದು ಅವರು ಸಮರ್ಪಕವಾಗಿ ಕೆಲಸ ಆಗುವುದಕ್ಕೆ ಮಾನಿಟರ್ ಮಾಡುತ್ತಿದ್ದಾರೆ. ಆದ್ದರಿಂದ ಇದಕ್ಕೆ ಕಾಲಾವಕಾಶ ಹೆಚ್ಚು ತೆಗೆದುಕೊಳ್ಳುವುದಿಲ್ಲ.

ಪ್ರಶ್ನೆ ಸಂಖ್ಯೆ: ೧೨೯ (೧೭೫೬)

ಶ್ರೀ ಎಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿ).— ಅಧ್ಯಕ್ಷರೇ, ಇದಕ್ಕೆ ಟೈಮ್ ಬೇಕು ಎಂದು ಕೇಳಿದ್ದೇನೆ,

ಅಧ್ಯಕ್ಷರು.— ಬನ್ನಿಕೋಡ್ ಅವರೇ, ಅವರು ಟೈಂ ಕೇಳಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ನಾನು ಕೇಳಿರುವ ಪ್ರಶ್ನೆ ಬಹಳ ಸರಳವಾದುದು. ಇದಕ್ಕೆ ಯಾವುದೇ ಮಾಹಿತಿಯನ್ನು ಯಾರಿಂದಲೂ ಪಡೆಯಬೇಕಾಗಿಲ್ಲ. ರೈತರು ಬಿತ್ತನೆ ಮಾಡಬೇಕಾದ ಕಾಲ ಪ್ರಾರಂಭವಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ.

ಅಧ್ಯಕ್ಷರು.— ಅವರು ಟೈಂ ಬೇಕು ಎಂದು ಕೇಳಿದ್ದಾರೆ. ನಾನು ಕೊಟ್ಟಿದ್ದೇನೆ. ಈಗ ವಾಟಾಳ್ ನಾಗರಾಜ್ ಅವರು ಪ್ರಶ್ನೆ ಕೇಳಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್.— ಈ ಬಗ್ಗೆ ವಿಳಂಬ ಮಾಡುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಉತ್ತರ ಕೊಡಬೇಕು.

ಅಧ್ಯಕ್ಷರು.— ಮುಂದಿನ ವಾರ ನೋಡೋಣ.

ಸಚಿವರುಗಳಿಂದ ಆಸ್ತಿಪಾಸ್ತಿಯ ಘೋಷಣೆ

೨೧೧ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಚಿವರುಗಳು ತಮ್ಮ ಆಸ್ತಿಪಾಸ್ತಿಗಳನ್ನು ಬಹಿರಂಗ ಪಡಿಸಿಕೊಳ್ಳಬೇಕೆಂಬ ನಿಯಮ ವಿದೆಯೇ ?

ಆ) ನಿಯಮವಿಲ್ಲದಿದ್ದರೆ ನಿಯಮ ಮಾಡಲಾಗುವುದೇ ?

ಇ) ಇದುವರೆಗೆ ಯಾವ ಯಾವ ಸಚಿವರುಗಳು ತಮ್ಮ ಆಸ್ತಿಪಾಸ್ತಿಗಳನ್ನು ಬಹಿರಂಗ ಪಡಿಸಿಕೊಂಡಿದ್ದಾರೆ ?